# <u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ರವರ ನ್ಯಾಯಾಲಯ, ಪಾಂಡವಪುರ</u>

ಸಿ.ಸಿ. ನಂಬ್ರಃ **731/2019** ಸಿ.ಡಬ್ಲ್ಯೂಃ **1** ಪಿ.ಡಬ್ಲ್ಯೂಃ **2**

ಸಾಕ್ಷಿದಾರರ ಹೇಳಿಕೆಗಳು **-**

ಸಾಕ್ಷಿಯ ಹೆಸರು - ಸುಮಾರಾಣಿ.ಬಿ.

ಗಂಡನ ಹೆಸರು - ಸುಪ್ರೀತ್

ವಯಸ್ಸು - 40 ವರ್ಷ

ಉದ್ಯೋಗ - ಪೊಲೀಸ್ ನಿರೀಕ್ಷಕರು, ಕೆ ಆರ್ ಪೇಟೆ ಪೊಲೀಸ್ ಠಾಣೆ

ವಾಸ ಸ್ಥಳ - ಕೆ ಆರ್ ಪೇಟೆ

ದಿನಾಂಕಃ 11.02.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ.ರವರಿಂದಃ</u>

ನಾನು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಉಪ ನಿರೀಕ್ಷಕರಾಗಿ 22.02.2019 ರಿಂದ 21.05.2020 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 13.07.2019 ರಂದು ನಾನು ರಾತ್ರಿ 9-00 ಗಂಟೆಯಲ್ಲಿ ಚಿನಕುರುಳಿ ಹೊರ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರಿಂದ ಮೇಲುಕೋಟೆ ಮಿಲಿಟರಿ ಹೋಟೆಲ್ ನಲ್ಲಿ ಆರೋಪಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಸದರಿ ಮಾಹಿತಿಯಂತೆ ನಾನು ಮತ್ತು ಚಾಸಾ-4 ರಿಂದ 10 ರವರೊಂದಿಗೆ ಹಾಗೂ ನಮ್ಮ ಇಲಾಖಾ ವಾಹನದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ರಾತ್ರಿ 9-15 ಗಂಟೆಗೆ ಹೋಟೆಲ್ ಬಳಿ ಹೋಗಿರುತ್ತೇವೆ. ನಂತರ ಸ್ಥಳದಲ್ಲಿ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ

ಹೋಗಿರುತ್ತಾರೆ. ಸದರಿ ವ್ಯಕ್ತಿಯ ಬಗ್ಗೆ ವಿಚಾರಣೆ ಮಾಡಲಾಗಿ ಅವರ ಹೆಸರು ಶ್ರೀಧರ್ ಬಿನ್ ಜವರೇಗೌಡ ಎಂದು ತಿಳಿದು ಬಂದಿರುತ್ತದೆ. ಸದರಿ ಸಮಯದಲ್ಲಿ ಹೋಟೆಲ್ ಮುಂಭಾಗ ಪರಿಶೀಲಿಸಿದಾಗ ಸದರಿ ಸ್ಥಳದಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ

1. 180 ml Old Tavaren Whisky -15 pouches
2. 180 ml 8PM Whisky – 5 pouches
3. 180ml Bag Piper Whisky – 10 pouches
4. 180 ml Raja Whisky – 12 pouches
5. 90ml Mc. Dowells Brandy – 7 pouches ಕಂಡುಬಂದಿದ್ದು,

ಒಟ್ಟಾಗಿ ಎಲ್ಲಾ ಮಧ್ಯದ ಪ್ಯಾಕೇಟುಗಳು ಮಧ್ಯವು 8.190 ಲೀಟರಗಳಿದ್ದವು. ಅವುಗಳಲ್ಲಿ ಕ್ರ ಸಂ 1 ರಿಂದ 5 ಪೋಚುಗಳಲ್ಲಿ ತಲಾ 4 ಪೋಚುಗಳಂತೆ ಎಫ್ ಎಸ್ ಎಲ್ ಗಾಗಿ ಪ್ರತ್ಯೇಕಿಸಿದ್ದು ಬಿಳಿಯ ಬಟ್ಟೆಯಲ್ಲಿ ಸುತ್ತಿ ಅರಗು ಸೀಲನ್ನು ಹಾಕಿ ಎಲ್ಲಾ ಮಧ್ಯದ ಪ್ಯಾಕೇಟುಗಳನ್ನು ರಾತ್ರಿ 9-30 ರಿಂದ 10-30 ಗಂಟೆಯವರೆಗೆ ಮಹಜರ ಕ್ರಮ ಮಾಡಿ, ಎಲ್ಲಾ ಮಧ್ಯದ ಪ್ಯಾಕೇಟುಗಳನ್ನು ಅಮಾನತುಪಡಿಸಿಕೊಳ್ಳಲಾಯಿತು.

ಸಾಕ್ಷಿಯು ಈಗಾಗಲೇ ಗುರುತಿಸಿಸಲಾದ ನಿಪಿ-1 ಮಹಜರನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ನಂತರ ನಾನು ಅಮಾನತು ಪಡಿಸಿಕೊಂಡ ಮಾಲುಗಳ ಸಮೇತ ಹೊರ ಠಾಣೆಗೆ ಹಾಜರಾಗಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿಯನ್ನು ತಯಾರು ಮಾಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ನ್ಯಾಯಾಲಯದಲ್ಲಿ ಬಿಳಿಯ ಬಟ್ಟೆಯಲ್ಲಿ ಸುತ್ತಿ, ಎಫ್ ಎಸ್ ಎಲ್ ಅರಗು ಸೀಲು ಆಗಿರುವ 20 ಮಧ್ಯದ ಪೋಚುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.-1 ರಿಂದ ಮು.ಮಾ.20 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಮು.ಮಾ.-

1 ರಿಂದ ಮು.ಮಾ.20 ರಲ್ಲಿ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ಮು.ಮಾ.-1 ಎ ರಿಂದ ಮು.ಮಾ.20 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮೂರು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-6 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಎಂ ವಕೀಲರಿಂದಃ</u>

ನಾನು ಘಟನೆಯ ದಿನದಂದು ನಿಖರವಾದ ಕರ್ತವ್ಯಕ್ಕೆ ಚಿನಕುರುಳಿ ಠಾಣೆಗೆ ಹೋಗಿರುವುದಿಲ್ಲ ಸಾಮಾನ್ಯ ಕರ್ತವ್ಯದ ಮೇರೆಗೆ ಸದರಿ ಸ್ಥಳಕ್ಕೆ ಹೋಗಿರುತ್ತೇನೆ. ಘಟನಾ ಸ್ಥಳವು ಕೂಗಳತೆ ಯ ದೂರದಲ್ಲಿರುತ್ತದೆ ಎಂದರೆ ಸರಿ. ಪಂಚರರಿರುವ ಸ್ಥಳವು ಠಾಣೆಯಿಂದ ದಕ್ಷಿಣ ದಿಕ್ಕಿಗೆ ಅರ್ಧ ಕಿ.ಮೀ. ಇರುತ್ತದೆ ಎಂದರೆ ಸರಿಯಲ್ಲ. ಪಂಚರರಿರುವ ಸ್ಥಳವು ಗಣಪತಿ ದೇವಸ್ಥಾನದ ಬಳಿ ಇದ್ದರು ಎಂದರೆ ಸರಿ. ಘಟನಾ ಸ್ಥಳವು ಠಾಣೆಯಿಂದ ಉತ್ತರ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ಪಂಚರರಿರುವ ಸ್ಥಳಕ್ಕೆ ಹೋಗಿ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಚಿನಕುರುಳಿ ಪೊಲೀಸ್ ಠಾಣೆಯ ಮುಂಭಾಗ ಇರುವ ರಸ್ತೆಯು ಜನಸಂದಣಿ ಇರುತ್ತದೆ ಎಂದರೆ ಸಾಕ್ಷಿಯು ರಾತ್ರಿ 9-00 ಗಂಟೆಯ ನಂತರ ಜನ ಸಂದಣಿ ಕಡಿಮೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ರಸ್ತೆಯ ಎರಡು ಭಾಗದಲ್ಲಿ ಅಂಗಡಿಗಳು ಇರುತ್ತದೆ ಎಂದರೆ ಸರಿ. ಸದರಿ ಜನ ಸಂದಣಿ ರಸ್ತೆಯಲ್ಲಿ ಪಂಚರರಾಗಿ ಕರೆ ತರಲು ನನಗೆ ಅಭ್ಯಂತರವೇನೂ ಇರಲಿಲ್ಲ. ಆರೋಪಿಯು ಎಷ್ಟು ದೂರದ ಅಂತರದಲ್ಲಿ ಕಾಣಿಸಿಕೊಂಡ ಎಂಬುದು ನನಗೆ ನೆನಪಿಲ್ಲ. ಆರೋಪಿ ಓಡಿ ಹೋಗಿರುವ ಬಗ್ಗೆ ನನ್ನ ನಿವೇದನೆಯಲ್ಲಿ ಹೇಳಿರುತ್ತೇನೆ ಆದರೆ ಹಿಡಿಯಲು ಪ್ರಯತ್ನ ಪಟ್ಟಿರುವ ಬಗ್ಗೆ ಹೇಳಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಗಿರಾಕಿಗಳು ನನಗೆ ಕಂಡು ಬಂದಿರುವುದಿಲ್ಲ. ಸದರಿ ಸ್ಥಳದಲ್ಲಿ ಹಣ ಹಾಗೂ ಖಾಲಿ ಪೋಚುಗಳು ಕಂಡು ಬಂದಿರುತ್ತದೆ ಆದರೆ ನಾವು ಜಪ್ತಿ ಮಾಡಿರುವುದಿಲ್ಲ. ಸದರಿ ವಿಚಾರದ ಬಗ್ಗೆ ನಿಪಿ-1 ರಲ್ಲಿ ನಾನು ನಮೂದು ಮಾಡಿರುವುದಿಲ್ಲ. ಯಾವುದೇ ಕಟ್ಟಡದ ಒಳಗಡೆ ಪ್ರವೇಶ ಮಾಡಬೇಕಾದರೆ ಶೋಧನಾ ವಾರೆಂಟನ್ನು ಪಡೆಯಬೇಕು ಎಂದರೆ ಸರಿ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಶೋಧನಾ ವಾರೆಂಟನ್ನು ಪಡೆದಿರುವುದಿಲ್ಲ.

ಕೋಣೆಯಲ್ಲಿ ಯಾವ ಭಾಗದಲ್ಲಿ ಹೋಟೆಲ್ ನಲ್ಲಿ ಚೀಲವಿತ್ತು ಎಂಬುದು ನನಗೆ ನೆನಪಿಲ್ಲ. ನಿಪಿ-1 ರಲ್ಲಿ ನಾನು ಅಮಾನತುಪಡಿಸಿಕೊಂಡ ಮಾಲುಗಳ ಸಂಖ್ಯೆ, ಬ್ಯಾಚ್ ನಂಬರ್ ಹಾಗೂ ತಯಾರಿಕಾ ದಿನಾಂಕಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾವು ಮಹಜರ್ ನ್ನು ಅಂಗಡಿ ಬಳಿ ಮಾಡಿರುತ್ತೇವೆ. ನಿಪಿ-1 ಮಹಜರ್ ನಲ್ಲಿ ಸಾರ್ವಜನಿಕ ರಸ್ತೆ ಅಂಗಡಿ ಮುಂಭಾಗ ಎಂದು ನಮುದಾಗಿರುತ್ತದೆ ಎಂದರೆ ಸರಿ.

ಆರೋಪಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರಲಿಲ್ಲ. ಅಂಕಿ ಅಂಶಗಳಿಗಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಹೋಟೆಲ್ ಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ರಿಂದ 20 ಕ್ಕೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಪ್ಲಾಸ್ಟಿಕ್ ಚೀಲವನ್ನು ಚಾಸಾ 13 ರವರಿಗೆ ನೀಡಿರುತ್ತೇನೆ. ನಾನು ಅಮಾನತುಪಡಿಸಿಕೊಂಡ ಎಲ್ಲಾ ಮಾಲುಗಳಲ್ಲಿ ವೈಜ್ಞಾನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದಿರುವುದಿಲ್ಲ. ನಿಪಿ-4 ರಿಂದ ನಿಪಿ-6 ಭಾವಚಿತ್ರವನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ, ಪಾಂಡವಪುರ